25

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 12/1/2021

# ಹೊಸ ಕಾಯ್ದೆಯನ್ವಯ ಆಡಳಿತ ಆರಂಭ

12-1-2021

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಹೊಸ ಕಾಯ್ದೆಯಡಿ ಬಿಬಿಎಂಪಿ ಆಡಳಿತ ಆರಂಭವಾಗಿದ್ದು, ಜಾಹೀರಾತು ಪ್ರದರ್ಶನಕ್ಕೆ ಅನುಮತಿ ಇರುವುದರಿಂದ ಬೈಲಾಕ್ಕೆ ತಿದ್ದುಪಡಿ ಮಾಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಬಿಬಿಎಂಪಿ ಆಯುಕ್ತ ಮಂಜುನಾಥ ಪ್ರಸಾದ್ ತಿಳಿಸಿದ್ದಾರೆ.

» ಜಾಹೀರಾತು ಪ್ರದರ್ಶನಕ್ಕೆ ಪುನಃ ಅನುಮತಿ

» ಶೀಘ್ರ ವಲಯಗಳ ಗಡಿ ಮರು ನಿರ್ಮಾಣ

ಸರ್ಕಾರದ ಆದೇಶದಂತೆ ಸೋಮವಾರ (ಜ.11) ಬಿಬಿಎಂಪಿಗೆ ಹೊಸ ಕಾಯ್ದೆ ಜಾರಿಗೊಂಡಿದೆ. ಮುಖ್ಯ ಆಯುಕ್ತರ ಅನುಮತಿ ಪಡೆದು ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಬಹುದಾಗಿದ್ದು, ಜಾಹೀರಾತು ಬೈಲಾ ತಿದ್ದುಪಡಿ ಮಾಡಬೇಕಾಗಿದೆ. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು. ಈ ಮೂಲಕ ನ್ಯಾಯಾಲಯ ಆದೇಶದಿಂದ ನಿಷೇಧಿಸಲಾಗಿದ್ದ ಜಾಹೀರಾತು ಫಲಕ, ಫ್ಲೆಕ್ಸ್, ಬ್ಯಾನರ್ ಪ್ರದರ್ಶನಕ್ಕೆ ಪುನಃ ಅನುಮತಿ ದೊರೆಯುವ ಮುನ್ಸೂಚನೆ ನೀಡಿದರು.

ಹೊಸ ಕಾಯ್ದೆ ಪ್ರಕಾರ ಬಿಬಿಎಂಪಿಯಲ್ಲಿ ಕನಿಷ್ಠ 225 ರಿಂದ ಗರಿಷ್ಠ 251 ವಾರ್ಡ್ ರಚಿಸಲು ಅವಕಾಶವಿದೆ. ಸರ್ಕಾರ 243 ವಾರ್ಡ್‌ಗಳ ರಚನೆಗೆ ಕಾಯ್ದೆ ರೂಪಿಸಿದೆ. ಇನ್ನು ಪಾಲಿಕೆ ಗಡಿಯನ್ನು 1 ಕಿ.ಮೀ. ವ್ಯಾಪ್ತಿಗೆ ಹೆಚ್ಚಿಸಲು ಅವಕಾಶವಿದ್ದು, ಹೊಸ ಪ್ರದೇಶಗಳನ್ನು ಸೇರ್ಪಡೆ ಮಾಡಿದ ಬಳಿಕ ಒಟ್ಟು ಜನಸಂಖ್ಯೆಗೆ ಅನುಗುಣವಾಗಿ ವಾರ್ಡ್ ಮರುವಿಂಗಡಿಸಲಾಗುವುದು. ಪಾಲಿಕೆಯಲ್ಲಿ ಪ್ರಸ್ತುತ 8 ವಲಯಗಳಿದ್ದು, 15 ವಲಯ ಮಾಡಬಹುದು. ಸರ್ಕಾರದ ನಿರ್ದೇಶನ ಪಡೆದುಕೊಂಡು ವಲಯಗಳ ಗಡಿ ಗುರುತಿಸಲಾಗುವುದು. ವಾರ್ಡ್ ಸಮಿತಿಯನ್ನು ಮುಖ್ಯ ಆಯುಕ್ತರು ನೇಮಕ ಮಾಡುತ್ತಾರೆ. ಪ್ರತಿ 3 ಮತಗಟ್ಟೆಗಳನ್ನು ಒಳಗೊಂಡಂತೆ ಏರಿಯಾ ಸಭಾ ನೇಮಕ ಮಾಡಲಾಗುತ್ತದೆ ಎಂದು ವಿವರಿಸಿದರು.



**ಹೊಸ ಕಟ್ಟಡ ಬೈಲಾ ಜಾರಿ**

**ಸದ್ಯಕ್ಕೆ 1976ರ ಕೆಎಂಸಿ ಕಾಯ್ದೆಯನ್ವಯ ಕಟ್ಟಡ ಬೈಲಾ ನಡೆಯುತ್ತಿದ್ದು, ಈಗ ಕೇಂದ್ರ ಸರ್ಕಾರ ನೀಡಿರುವ ಮಾದರಿ ಕಟ್ಟಡ ಬೈಲಾವನ್ನು ಬಿಬಿಎಂಪಿ ಹೊಸ ಕಾಯ್ದೆ ಮೂಲಕ ಜಾರಿಗೊಳಿಸಲಾಗುವುದು. ಈ ಪ್ರಕಾರ ಕಟ್ಟಡ ನಿರ್ಮಾಣ ನೀಲಿನಕ್ಷೆ, ನಕ್ಷೆಗೆ ಅನುಮತಿ ನೀಡುವ ಶುಲ್ಕ ವಿಧಿಸುವುದು ಹಾಗೂ ಕಟ್ಟಡ ನಿರ್ಮಾಣ ನಿಯಮ ಉಲ್ಲಂಘನೆ ಪ್ರಮಾಣ ಸಡಿಲಿಕೆ ಜಾರಿಗೆ ತರುವ ಸಾಧ್ಯತೆಯಿದೆ.**

**ಅಧಿಕಾರಿಗಳ ಕಾರ್ಯಭಾರ ಬದಲು:** ಹೊಸ ಕಾಯ್ದೆ ಅನುಸಾರ ಕೇಂದ್ರ ಕಚೇರಿಗೆ ಆಯುಕ್ತರ ಹುದ್ದೆಯನ್ನು ಮೇಲ್ದರ್ಜೆಗೇರಿಸಿ, ಸರ್ಕಾರ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಸಮಾನ ಅರ್ಹತೆ ಹೊಂದಿರುವ ಅಧಿಕಾರಿಯನ್ನು ಮುಖ್ಯ ಆಯುಕ್ತರನ್ನಾಗಿ ನೇಮಕ ಮಾಡಲಾಗುತ್ತದೆ. ಜತೆಗೆ, ಸದ್ಯಕ್ಕಿರುವ 8 ವಲಯಗಳನ್ನು 15 ವಲಯಗಳಾಗಿ ಮಾಡುತ್ತಿದ್ದು, ಐಎಎಸ್ ಹಿರಿಯ (ಸರ್ಕಾರಿ ಕಾರ್ಯದರ್ಶಿ ಹುದ್ದೆಗೆ ಕಡಿಮೆಯಿಲ್ಲದ) ಅಧಿಕಾರಿಗಳನ್ನು ವಲಯ ಆಯುಕ್ತರನ್ನಾಗಿ ನೇಮಕ ಮಾಡಲಾಗುತ್ತದೆ. ಇವರು ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಧೀನದಲ್ಲಿ ನೇರವಾಗಿ ಕಾರ್ಯನಿರ್ವಹಿಸಲಿದ್ದಾರೆ. ವಲಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಖ್ಯಕಚೇರಿಯ ಗಮನಕ್ಕೆ ತಾರದೆ ಕೆಲವು ಕಾರ್ಯಭಾರ ನಡೆಸುವ, ಕಾಮಗಾರಿಗೆ ಅನುಮತಿ ನೀಡುವ ಅಧಿಕಾರ ಹೊಂದಿರುತ್ತಾರೆ.